### ಮಾನವ ಬಂಡವಾಳವನ್ನು ಕುರಿತು ಮರುಚಿಂತನೆ

- ಶ್ರೀ ಅಮ್ಮನ್ ಮದನ್

ಶ್ರೀಯುತ ಅಮ್ಮನ್ ಮದನ್ ರವರು ಬೆಂಗಳೂರಿನ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಪ್ರಸ್ತುತ ಸಾಮಾಜಿಕ ಶ್ರೇಣೀಕರಣ ಮತ್ತು ಶಿಕ್ಷಣ, ಸಾಮಾಜಿಕ ಸಿದ್ಧಾಂತ ಮತ್ತು ಸಂಸ್ಥೆಗಳ ಸಮಾಜಶಾಸ್ತ್ರಗಳು ಅವರ ಸಂಶೋಧನಾ ಆಸಕ್ತಿಗಳು. ಅಮ್ಮನ್ ಚಂಡೀಗಢದ ಪಂಜಾಬ್ ವಿಶ್ವವಿದ್ಯಾಲಯದಿಂದ ದಿವ್ಯದರ್ಶಿ ಕಪೂರ್ ಮಾರ್ಗದರ್ಶನದೊಂದಿಗೆ ಮಾನವಶಾಸ್ತ್ರದಲ್ಲಿ ಎಂ.ಎಸ್ಸಿಯನ್ನು ಮತ್ತು ನಂತರ ಜೆಎನ್ ಯು ನಲ್ಲಿ ಸಾಮಾಜಿಕ ವ್ಯವಸ್ಥೆಗಳ ಅಧ್ಯಯನ ಕೇಂದ್ರದಲ್ಲಿ ಅವಿಜಿತ್ ಪಾಠಕ್ ರ ಅಡಿಯಲ್ಲಿ ಎಂಫಿಲ್ ಮತ್ತು ಪಿಹೆಚ್ ಡಿ ಯನ್ನು ಮಾಡಿದರು. ಅವರು ಜೆಎನ್ ಯು ನಲ್ಲಿನ ಅಕಾಡೆಮಿಕ್ ಸ್ಟಾಫ್ ಕಾಲೇಜಿನಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದರು. ನಂತರ ಮಧ್ಯಪ್ರದೇಶದ ಹೋಶಂಗಾಬಾದ್ ನ ಏಕಲವ್ಯ ಸಂಸ್ಥೆಯಲ್ಲಿ ಪೂರ್ಣಕಾಲಿಕ ಸೇವೆ ಸಲ್ಲಿಸಿದ್ದಾರೆ. ಅಮ್ಮನ್ ರವರು ಹೋಮೀ ಭಾಭಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್ (HBCSE)ನಲ್ಲಿ ಒಂದು ಸೆಮಿಸ್ಟರ್ ಕಲಿಸಿದ ನಂತರ ಕಾನ್ಪುರದ ಐಐಟಿ ಯಲ್ಲಿ ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗಕ್ಕೆ ಸೇರಿದರು. ಅಲ್ಲಿ ಉತ್ಕೃಷ್ಟ ಬೋಧನೆಯ ಸಲುವಾಗಿ ಪ್ರಶಂಸೆಗಳನ್ನು ಪಡೆದಿದ್ದಾರೆ.

ಅಮ್ಮನ್ ರವರು (TISS)ನಲ್ಲಿ ಪ್ರಾಥಮಿಕ ಶಿಕ್ಷಣದ ಕುರಿತಾದ ಎಂಎ ಕಾರ್ಯಕ್ರಮಕ್ಕೆ ಅತಿಥಿ ಅಧ್ಯಾಪಕರಾಗಿದ್ದಾರೆ. ಅವರು ಹಲವಾರು ಎನ್ ಜಿ ಒಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಅವರು ಸಮಕಾಲೀನ ಶಿಕ್ಷಣ ಸಂವಾದದ ಟ್ರಸ್ಟಿಯಾಗಿದ್ದಾರೆ ಮತ್ತು ಭಾರತೀಯ ಶಿಕ್ಷಣ ತಜ್ಞರು ಪಾಂಡಿತ್ಯಪೂರ್ಣ ಸಂವಹನ ಮತ್ತು ಸಾಮಾನ್ಯ ಜನರ ಒಳಿತು ಎರಡೂ ಕಾರಣಗಳಿಗಾಗಿಯೂ ಬರೆಯಬೇಕು ಎಂಬುದರಲ್ಲಿ ನಂಬಿಕೆ ಹೊಂದಿದ್ದಾರೆ.

## ಮಾನವ ಬಂಡವಾಳವನ್ನು ಕುರಿತ ಮರುಚಿಂತನೆ

ಮಾನವ ಬಂಡವಾಳವೆಂಬುದು ಕನಿಷ್ಠಪಕ್ಷ ಆಡಮ್ ಸ್ಮಿತ್ ನ ಕಾಲದಷ್ಟಾದರೂ ಹಳೆಯ ಕಲ್ಪನೆಯಾಗಿದೆ. ಇದು ಬಡ ದೇಶವನ್ನು ಶ್ರೀಮಂತಗೊಳಿಸುವ ಭರವಸೆಯನ್ನು ಮೂಡಿಸಿರುವುದರಿಂದ 1960ರ ದಶಕದಿಂದಲೂ ವ್ಯಾಪಕ ಜನಪ್ರಿಯತೆಯನ್ನು ಗಳಿಸಿದೆ. ತಮ್ಮ ನಾಗರಿಕರನ್ನು ಸಬಲೀಕರಣಗೊಳಿಸಲು ಮತ್ತು ಅವರ ಸಂಪತ್ತನ್ನು ವೃದ್ಧಿಸಲು ಬಯಸುವ ದೇಶಗಳು ತಮ್ಮ ಮಾನವ ಬಂಡವಾಳವನ್ನು ಬೆಳೆಸಿಕೊಳ್ಳಬೇಕು ಎಂಬ ಕಲ್ಪನೆಯನ್ನು ಗ್ಯಾರಿ ಬೆಕರ್ (1975) ಮತ್ತು ಥಿಯೋಡರ್ ಡಬ್ಲೂ ಷುಲ್ಟ್ಜ್ (1077) ಅವರ ಕೃತಿಗಳು ಹರಡಿದವು. ಬಂಡವಾಳದ ಇತರ

ರೂಪಗಳಾದ ಭೂಮಿ ಮತ್ತು ಯಂತ್ರೋಪಕರಣಗಳನ್ನು ಹಂಚಿಕೊಳ್ಳುವುದು ಮತ್ತು ಎಲ್ಲರಿಗೂ ಸಮಾನವಾಗಿ ವಿತರಿಸುವುದು ಕಷ್ಟಕರವಾಗಿತ್ತು. ಅವುಗಳ ಪೂರೈಕೆಯು ಸೀಮಿತವಾಗಿತ್ತು ಮತ್ತು ಇತರರಿಗೆ ಅವುಗಳ ವರ್ಗಾವಣೆ ಮಾಡುವುದನ್ನು ವಿರೋಧಿಸುವ ಜನರಿಂದ ನಿಯಂತ್ರಿಸಲ್ಪಡುತ್ತಿತ್ತು. ಆದರೆ ಯಾವುದೇ ಮಿತಿಯಿಲ್ಲದೆ ಮಾನವ ಬಂಡವಾಳವನ್ನು ಎಷ್ಟು ಬೇಕಾದರೂ ಹೆಚ್ಚಿಸಬಹುದಾಗಿದೆ. ಭೂಮಿ ಮತ್ತು ಹಣದಂತೆ, ನೀವು ಅದನ್ನು ಯಾರಿಂದಲೂ ಕಸಿದುಕೊಳ್ಳಲೂ ಸಾಧ್ಯವಿಲ್ಲ. ಬಡತನ ಮತ್ತು ಮಾನವರ ಕ್ಲೇಶವನ್ನು ಕಡಿಮೆ ಮಾಡಲು ಜನರಿಗೆ ಹೆಚ್ಚಿನ ಶಿಕ್ಷಣವನ್ನು ನೀಡುವ ಹೊಸ ಸಂಸ್ಥೆಗಳನ್ನು ನಿರ್ಮಿಸಿದರೆ ಸಾಕು ಎಂದು ತೋರಿತು. ವಸಾಹತುಶಾಹಿ ಹೇರಿದ ಕತ್ತಲೆಯಿಂದ ಹೊರಬರಲು ಹೆಣಗಾಡುತ್ತಿರುವ ದೇಶಗಳಿಗೆ ಮಾನವ ಬಂಡವಾಳವು ಅವರ ಎಲ್ಲಾ ಸಮಸ್ಯೆಗಳ ಉತ್ತರವಾಗಿ ಕಂಡಿತು. ಅದರಲ್ಲೂ ಎಲ್ಲಿ ಹೆಚ್ಚಿನ ಸಂಖ್ಯೆಯ ಕಳಪೆ ಸಂಬಳದ ಕಾರ್ಮಿಕರಿದ್ದರೋ ಅಲ್ಲಿ ಇದು ಎಲ್ಲಾ ಸಮಸ್ಯೆಗಳ ಉತ್ತರವಾಗಿ ತೋರಿತು. ಇಂದಿನ ಕಾಲದಲ್ಲಿಯೂ ಸಹ ಮಾನವ ಬಂಡವಾಳದಲ್ಲಿ ಹೂಡಿಕೆ ಮಾಡುವ ಕಲ್ಪನೆಯು ಬಹಳ ಆಕರ್ಷಕವಾಗಿ ಉಳಿದಿದೆ ಹಾಗೂ ದೇಶದ ಸ್ವಾತಂತ್ರ್ಯ ಮತ್ತು ಸುರಕ್ಷತೆಯು ಜ್ಞಾನದ ಆರ್ಥಿಕತೆಯ (knowlege economy) ಮೇಲೆ ಅವಲಂಬಿತವಾಗಿದೆ ಎಂದು ಹೇಳಲಾಗುತ್ತಿದೆ.

ಅರ್ಧ ಶತಮಾನದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಧ್ಯಯನಗಳು  ಮಾನವ ಬಂಡವಾಳವನ್ನು ಇನ್ನೂ ಹೆಚ್ಚಿನ ಒಂದು ಸಂತುಲಿತ ದೃಷ್ಟಿಕೋನದಲ್ಲಿ ಪರಿಗಣಿಸುವಂತೆ ಪ್ರೇರೇಪಿಸಿವೆ. ಇದು ನಿಜಕ್ಕೂ ಒಂದು ಅಗಾಧ ಸಾಮರ್ಥ್ಯವುಳ್ಳ ಪರಿಕಲ್ಪನೆಯಾಗಿದೆ. ಆದರೆ ಇದನ್ನು ರಾಮಬಾಣವೆಂದು ನೋಡಬಾರದು. ಬದಲಿಗೆ ಹೆಚ್ಚು ಎಚ್ಚರಿಕೆಯಿಂದ ಅಳೆದು, ತೂಗಿ ಬಳಸಬೇಕು. ಹೆರೆಲ್ ರವರು ಮಾನವ ಬಂಡವಾಳದ ಕಲ್ಪನೆಯನ್ನು ಸೀಮಿತಗೊಳಿಸುವ ಕೆಲವು ಸಾಮಾಜಿಕ ಮತ್ತು ಶೈಕ್ಷಣಿಕ ಪರಿಗಣನೆಗಳನ್ನು ವಿವರಿಸಲು ಪ್ರಯತ್ನಿಸಿದರು.

**ಮಾನವ ಬಂಡವಾಳದ ಗುಪ್ತ ಮುಖ**

ಜ್ಞಾನ, ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಹೆಚ್ಚಿಸುತ್ತದೆ ಎಂಬ ಕಾರಣಗಳನ್ನು ಹೊರತಾಗಿಯೂ ಶಿಕ್ಷಣವು ಉದ್ಯೋಗ ಅವಕಾಶಗಳನ್ನು ಹೆಚ್ಚಿಸುತ್ತದೆ ಎಂದು ಮೈಕೆಲ್ ಸ್ಪೆನ್ಸ್ (1973), ಜೋಸೆಫ್ ಸ್ಟಿಗ್ಲಿಟ್ಜ್ (1975) ಮತ್ತು ಕೆನ್ನೆತ್ ಆರೋ (1973) ರವರನ್ನು ಸೇರಿದಂತೆ ಹಲವಾರು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಎಲ್ಲಾ ನೇಮಕಾತಿಗಳಲ್ಲದಿದ್ದರೂ ಭಾಗಶಃ ನೇಮಕಾತಿಗಳಲ್ಲಾದರೂ  ಅಭ್ಯರ್ಥಿಯು ಹೊಂದಿರುವ ನಿಜವಾದ ಜ್ಞಾನದ ಕಾರಣಕ್ಕೆ ಅಲ್ಲದೆ, ಅವನು ಒಬ್ಬ ಉತ್ತಮ ಕೆಲಸಗಾರನಾಗಬಲ್ಲನೆಂಬ ಭರವಸೆ

ನೀಡುವ ಕೆಲವು ಸಂಕೇತಗಳನ್ನು ಉದ್ಯೋಗದಾತರು ಗುರುತಿಸುವುದರಿಂದ ನೇಮಕಾತಿ ಆಗುತ್ತದೆ ಎಂದು "ಸಿಗ್ನಲಿಂಗ್ ಸಿದ್ಧಾಂತ" (signaling theory) ಹೇಳುತ್ತದೆ. ಉದಾಹರಣೆಗೆ, ಅನೇಕ ಎಂಜಿನಿಯರುಗಳ ಉದ್ಯೋಗದಾತರು ಎನ್ ಐಟಿ ಮತ್ತು ಐಐಟಿ ಗಳಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಅವರಿಗೆ ಹೆಚ್ಚು ಎಂಜಿನಿಯರಿಂಗ್ ತಿಳಿದಿರುತ್ತದೆ ಎಂಬುದು ಈ ಆಯ್ಕೆಗೆ ಇರುವ ಆಧಾರವಲ್ಲ. ಬದಲಿಗೆ, ಈ ಸಂಸ್ಥೆಗಳಿಗೆ ಪ್ರವೇಶ ಪಡೆದ ವ್ಯಕ್ತಿಯು ಕಠಿಣ ಮತ್ತು ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಎಂಬ ಆಲೋಚನೆ ಅಲ್ಲಿ ಕೆಲಸ ಮಾಡಿರುತ್ತದೆ. ಆದ್ದರಿಂದ ಆ ವಿದ್ಯಾರ್ಥಿಯು ಬಿ ಟೆಕ್ ಮಾಡುವಾಗ ಎಷ್ಟು ಅಂಕ ಗಳಿಸಿದ್ದಾನೆ ಎಂಬುದರ ಬಗ್ಗೆ ಅವರು ಹೆಚ್ಚಾಗಿ ಗಮನ ಹರಿಸುವುದಿಲ್ಲ.

ಈ ಅರ್ಥಶಾಸ್ತ್ರಜ್ಞರ ಜೊತೆಜೊತೆಗೇ ಸಮಾಜಶಾಸ್ತ್ರಜ್ಞರಾದ ರ್ಯಾಂಡಲ್ ಕೊಲಿನ್ಸ್ (1971, 1979), ರೇಮಂಡ್ ಮರ್ಫಿ (2001) ಮತ್ತು ಎಲ್ವಾರ್ ಬರ್ಗ್ (2003) ಅವರು ಶಿಕ್ಷಣವು ಹೇಗೆ ಒಂದು ಕೆಲಸದ ಉತ್ತಮ ಕಾರ್ಯಕ್ಷಮತೆಗೆ ಹೆಚ್ಚಿನ ಕೊಡುಗೆ ನೀಡದಿದ್ದರೂ, ಹೆಚ್ಚಿನ ಸಂಬಳ ಅಥವಾ ಉದ್ಯೋಗದ ಹೆಚ್ಚಿನ ಅವಕಾಶಗಳನ್ನು ಒದಗಿಸಲು ಕಾರಣವಾಗುತ್ತದೆ ಎಂಬುದಕ್ಕೆ ಇನ್ನೂ ಹಲವು ಕಾರಣಗಳನ್ನು ಸೂಚಿಸಿದ್ದಾರೆ. ಒಂದು ಕೆಲಸಕ್ಕೆ ತೃಪ್ತಿಕರವಾಗಿ ಮಾಡುವ ಮೂಲಭೂತ ಸಾಮರ್ಥ್ಯವುಳ್ಳ ಹಲವಾರು ಜನರು ಆಕಾಂಕ್ಷಿಗಳಾಗಿದ್ದಾಗ ಮತ್ತು ಅವರನ್ನು ಸೇರಿಸಿಕೊಳ್ಳಲು ತುಂಬಾ ಕಡಿಮೆ ಹುದ್ದೆಗಳು ಇದ್ದಾಗ ಅಲ್ಲಿ "ಶೈಕ್ಷಣಿಕ ಅರ್ಹತೆ"ಗೆ ಹೆಚ್ಚು (credentialism)ಪ್ರಾಶಸ್ತ್ಯ ಕೊಡಲಾಗುತ್ತದೆ. ಅಂತಹ ಸಮಯದಲ್ಲಿ ಅದಕ್ಕಾಗಿಯೇ ಕೆಲವರು ಉನ್ನತ ಶೈಕ್ಷಣಿಕ ಪದವಿಗಳನ್ನು ಅರಸಿ ಹೋಗಬಹುದು (ವಾಸ್ತವದಲ್ಲಿ ಈ ಪದವಿಗಳು ಇಲ್ಲದೆಯೇ ಅವರು ಉತ್ತಮ ಕಾರ್ಯಕ್ಷಮತೆಯನ್ನು ತೋರುವ ಸಾಮರ್ಥ್ಯವನ್ನು ಅವರು ಹೊಂದಿದ್ದರೂ ಸಹ), ಹಾಗೂ ಅವರನ್ನು ನೇಮಕ ಮಾಡಿಕೊಳ್ಳುವ ಸಾಧ್ಯತೆಯನ್ನು ಅದು ಹೆಚ್ಚಿಸುತ್ತದೆ. ಮತ್ತೊಮ್ಮೆ ಎಂಜಿನಿಯರಿಂಗ್ ನೇಮಕಾತಿಯನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ಸ್ನಾತಕ ಪದವಿ ಹೊಂದಿರುವವರು ಪ್ರೋಗ್ರಾಮಿಂಗ್ ಕೆಲಸವನ್ನು ಮಾಡಲು ತಕ್ಕಮಟ್ಟಿಗೆ ಸಮರ್ಥರಾಗಿರುತ್ತಾರೆ. ಆದಾಗ್ಯೂ ಲಭ್ಯವಿರುವ ಕಡಿಮೆ ಸಂಖ್ಯೆಯ ಉದ್ಯೋಗಗಳಿಗಾಗಿ ಹಲವಾರು ಸ್ನಾತಕ ಪದವಿ ವಿದ್ಯಾರ್ಥಿಗಳು ಆಕಾಂಕ್ಷಿಗಳಾದಾಗ, ಸ್ನಾತಕೋತ್ತರ ಪದವಿ ಹೊಂದಿರುವವರು ಆ ಕೆಲಸವನ್ನು ಗಿಟ್ಟಿಸಬಹುದು.

ನಾವು ಮಾನವ ಬಂಡವಾಳವನ್ನು ನೋಡುವ ದೃಷ್ಟಿಕೋನದಲ್ಲಿನ ಮತ್ತಷ್ಟು ತೊಡಕುಗಳು ಸಂಘಟನೆಗಳ ರಾಜಕೀಯದ ಅಧ್ಯಯನಗಳಿಂದ ಬಂದಿವೆ. ಎಲ್ಲಾ ಸಂಘಟನೆಗಳೂ ಪೈಪೋಟಿಗಿಳಿದವರ (contending groups) ಮತ್ತು ಐಡಿಯಾಲಜಿಗಳ ನಡುವಿನ ಜಗಳದ ಅಖಾಡಗಳಾಗಿವೆ ಎನ್ನುವುದನ್ನು ಈಗ ಎಲ್ಲರಿಗೂ ತಿಳಿದಿರುವ ಸತ್ಯವಾಗಿದೆ. ಇದು ಮಾನವ ಸಾಮಾಜಿಕ ಜೀವನದ ಅನಿವಾರ್ಯ ಅಂಶವಾಗಿದೆ. ರ್ಯಾಂಡಲ್ ಕಾಲಿನ್ಸ್ (ಬಿಡ್) ಮತ್ತು ಪಿಯರ್ ಬೋರ್ದು (ಬೋರ್ದು ಮತ್ತು ಪ್ಯಾಸೆರಾನ್, 1990) ಪೈಪೋಟಿಗಿಳಿದವರ ಸದಸ್ಯತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರವಿರುವ ಕುರಿತು ಗಮನಸೆಳೆದಿದ್ದಾರೆ. ಸಾಂಸ್ಕೃತಿಕ ನಂಬಿಕೆಗಳು, ಮೌಲ್ಯಗಳು ಮತ್ತು ಒಲವು ಯಾವ ಕಡೆ ಇವೆ ಎಂಬ ಆಧಾರದ ಮೇಲೆ ಸಂಘಟನೆಗಳಲ್ಲಿ ಗುಂಪುಗಳು ಮತ್ತು ಬಣಗಳು ರೂಪುಗೊಳ್ಳುತ್ತವೆ ಎಂದು ಕೊಲಿನ್ಸ್ ವಾದಿಸುತ್ತಾರೆ. ನೇಮಕಾತಿ ಮಾಡಿಕೊಳ್ಳುವವರು ತಮ್ಮದೇ ಆದ ಮೌಲ್ಯಗಳು, ನಂಬಿಕೆಗಳು ಮತ್ತು ಸಾಂಸ್ಕೃತಿಕ ಶೈಲಿಗಳಿಗೆ ಅನುಗುಣವಾದ ಪದವಿಗಳನ್ನು ಹುಡುಕುತ್ತಾರೆ. ಇವುಗಳು ತಮ್ಮದೇ ಆದ ಸ್ಥಾನಗಳನ್ನು ಮೌಲ್ಯೀಕರಿಸುವ ಮತ್ತು ಸಂಸ್ಥೆಯೊಳಗೆ ತಮ್ಮ ಬೆಂಬಲವನ್ನು ಹೆಚ್ಚಿಸಲು ಕಾರಣವಾಗುತ್ತವೆ.

ಮುಕ್ತ ಅವಕಾಶದ ಭಾಷೆಯನ್ನು ಮಾತನಾಡುತ್ತಲೇ, ಸಮಾಜದ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ಅಧಿಕಾರ ಬಲವುಳ್ಳವರಿಗೆ ಶಿಕ್ಷಣವು ಒಂದು ಮಾರ್ಗವಾಗಬಹುದು ಎಂದು ಪಿಯರ್ ಬೋರ್ದು ಹೇಳಿದ್ದಾರೆ. ಯಾವುದು ಬಂಡವಾಳವನ್ನು ಒಳಗೊಂಡಿರಯತ್ತದೆಯೋ ಅದು ಒಳ್ಳೆಯದೇ ಆಗಿರಬೇಕಿಲ್ಲ ಎಂದು ಅವರು ಸೂಚಿಸಿದ್ದಾರೆ. ಉದಾಹರಣೆಗೆ, ಅಧಿಕ ಸಂಬಳದ ವಲಯಗಳಲ್ಲಿ ಸದಸ್ಯತ್ವ ಪಡೆಯಲು ಇಂಗ್ಲಿಷ್ ಭಾಷೆಯಲ್ಲಿನ ನಿರರ್ಗಳತೆ ಇಂದು ಅಗತ್ಯವಾಗಿದೆ. ಆದರೆ ಇದು ಕನ್ನಡ ಅಥವಾ ಹಿಂದಿಗಿಂತ ಯಾವುದೇ ರೀತಿಯಲ್ಲೂ ಇಂಗ್ಲಿಷ್ ಆಂತರಿಕವಾಗಿ ಉತ್ತಮವಾಗಿದೆ ಎಂದು ಅರ್ಥೈಸುವುದಿಲ್ಲ. ಬದಲಿಗೆ ಇಂಗ್ಲಿಷ್ ಏಕೆ ಪ್ರಮುಖವಾಗುತ್ತದೆ ಎಂದರೆ ಇಂಗ್ಲಿಷ್ ಅನ್ನು ಮಾತನಾಡುವವರು ಕೆಲವು ರೀತಿಯ ಸಂಸ್ಥೆಗಳಲ್ಲಿ ಮತ್ತು ಸಾಮಾಜಿಕ ರಚನೆಗಳಲ್ಲಿ ಹೆಚ್ಚಿನ ಪ್ರಾಬಲ್ಯವನ್ನು ಹೊಂದಿದ್ದಾರೆ. ಪ್ರಾಬಲ್ಯದ ಗುಂಪುಗಳು ಈ ಸಾಂಸ್ಕೃತಿಕ ಬಂಡವಾಳವನ್ನು ಹೊಂದಿರುತ್ತವೆ ಮತ್ತು ಅದನ್ನು ತಮ್ಮ ಸಂಪರ್ಕಜಾಲಗಳಿಗೆ ಪ್ರವೇಶವನ್ನು ನಿಯಂತ್ರಿಸಲು ಬಳಸುತ್ತವೆ.

ಸಮಾಜವನ್ನು ಸಂಘರ್ಷ-ಆಧಾರಿತ ದೃಷ್ಟಿಕೋನದಿಂದ ನೋಡುವ ಬೋರ್ದು ಮತ್ತು ಇತರರು ಹೇಳುವ ಪ್ರಕಾರ ಯಾವುದು ಮಾನವ ಬಂಡವಾಳ ಮತ್ತು ಯಾವುದು ಅಲ್ಲ ಎಂಬುದನ್ನು ಸಾಮಾನ್ಯವಾಗಿ ಪರಸ್ಪರ ಪೈಪೋಟಿಗಿಳಿದ

ಸಾಮಾಜಿಕ ಗುಂಪುಗಳ ನಡುವಿನ ಹೋರಾಟಗಳ ಮೂಲಕ ವ್ಯಾಖ್ಯಾನಿಸಲಾಗುತ್ತದೆ. ಇದು ಭಾಗಶಃ ಅಧಿಕಾರದ ಹಂಚಿಕೆ, ವರ್ಗ ವ್ಯವಸ್ಥೆ, ಜಾತಿ, ಪಿತೃಪ್ರಭುತ್ವ, ಪ್ರದೇಶಗಳು ಮತ್ತು ಭಾಷೆಗಳ ನಡುವಿನ ಅಸಮತೋಲನ ಮತ್ತು ಮುಂತಾದವುಗಳ ಅಭಿವ್ಯಕ್ತಿಯಾಗಿದೆ. ಜೊತೆಗೆ, ಇವು ಕೇವಲ ತಾಂತ್ರಿಕ, ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ನಿರ್ದಿಷ್ಟ ಸನ್ನಿವೇಶವೊಂದರ ಭಾಗಶಃ ಅಗತ್ಯತೆಗಳು ಕೂಡಾ ಆಗಿರಬಹುದು.

**ಮಾನವ ಬಂಡವಾಳದತ್ತ ಒಂದು ನೈತಿಕ ನೋಟ**

ಮಾನವ ಬಂಡವಾಳವನ್ನು ತಿರುಚಿ ಬಳಸಲಾಗುತ್ತದೆ ಮತ್ತು ಅಲ್ಲಿ ಪಕ್ಷಪಾತವು ಕಾಲಿಡುತ್ತದೆ ಎಂಬ ಕಾರಣಕ್ಕೆ ಮಾನವ ಬಂಡವಾಳದ ಕಲ್ಪನೆಯನ್ನು ತಿರಸ್ಕರಿಸುವುದು ಅವಿವೇಕದ ನಡೆಯಾಗುತ್ತದೆ. ನಾವು ಅದನ್ನು ನ್ಯಾಯ ಮತ್ತು ಸ್ವಾತಂತ್ರ್ಯದ ತತ್ವಗಳೊಂದಿಗೆ ಜೋಡಿಸಿ ಆ ಕಲ್ಪನೆಯನ್ನು ಸುಧಾರಿಸಬಹುದು. ಇದಕ್ಕೆ ಒಂದು ಶ್ರೇಷ್ಠ ಉದಾಹರಣೆಯೆಂದರೆ ನಮ್ಮ ಸ್ವಾತಂತ್ರ್ಯ ಹೋರಾಟ. ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಹೋರಾಡಿದ ಗಾಂಧಿ ಮತ್ತು ಇತರ ಅನೇಕರು ವಸಾಹತುಶಾಹಿ ಆಳ್ವಿಕೆಯಲ್ಲಿ ಆರ್ಥಿಕತೆಯ ಪಾತ್ರವನ್ನು ಅರಿತಿದ್ದರು. ಭಾರತೀಯ ಉತ್ಪನ್ನಗಳ ಜಾಗದಲ್ಲಿ ಕ್ರಮೇಣವಾಗಿ ಬ್ರಿಟಿಷ್ ಸರಕುಗಳು ಕಾಣಿಸಿಕೊಂಡವು. ಇವು ವಸಾಹತುಶಾಹಿ ಆಡಳಿತಗಾರರನ್ನು ಶ್ರೀಮಂತಗೊಳಿಸಿದವು ಮತ್ತು ವಸಾಹತು ಆಳ್ವಿಕೆಗೆ ಒಳಪಟ್ಟವರನ್ನು ಬಡತನದತ್ತ ದೂಡಿದವು. ಇಂತಹ ಪರಿಸ್ಥಿತಿಯಲ್ಲಿ ಭಾರತೀಯರು ಮಾರುಕಟ್ಟೆಯ ಭಾಗವಾಗುವಂತೆ ಮಾಡಲು, ಅಂದರೆ, ಬ್ರಿಟಿಷ್ ಸರಕುಗಳ ವಿತರಣೆಯಲ್ಲಿ ಸಹಾಯ ಮಾಡಲು ಮಾನವ ಬಂಡವಾಳದ ಕುರಿತಾದ ಸರಳ ತಿಳುವಳಿಕೆಯನ್ನು ನೀಡುವ ತರಬೇತಿಯ ಅಗತ್ಯವಿತ್ತು. ಆದಾಗ್ಯೂ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಶ್ರಮ ಮತ್ತು ಉತ್ಪಾದನೆಯ ಅರ್ಥದ ಬಗ್ಗೆ ಆಳವಾದ, ನೈತಿಕವಾಗಿ ತಿಳುವಳಿಕೆಯುಳ್ಳ ದೃಷ್ಟಿಕೋನವನ್ನು ಪಡೆದುಕೊಳ್ಳಲು ಸಮರ್ಥರಾಗಿದ್ದರು. ಭಾರತೀಯ ಉತ್ಪನ್ನಗಳ ಜಾಗದಲ್ಲಿ ಬ್ರಿಟನ್ ನಲ್ಲಿ ತಯಾರಿಸಿದ ಉತ್ಪನ್ನಗಳು ಬಂದು ಕುಳಿತದ್ದು ಭಾರತದಲ್ಲಿನ ಬ್ರಿಟಿಷರ ಪ್ರಾಬಲ್ಯಕ್ಕೆ ಮುಖ್ಯ ಕಾರಣವಾಯಿತು ಎಂದು ಅವರು ಅರ್ಥಮಾಡಿಕೊಂಡರು. ಭಾರತೀಯರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಬಯಸಿದ ಅವರು ಮಾನವ ಬಂಡವಾಳದ ಕೃಷಿಗೆ ಗಮನಾರ್ಹವಾಗಿ ವಿಭಿನ್ನವಾದ ವಿಧಾನವನ್ನು ತೆಗೆದುಕೊಂಡರು. ಬ್ರಿಟಿಷರಿಗೆ ಉತ್ತಮ ಉದ್ಯೋಗಿಗಳಾಗಿ ಬದುಕುವ ಸಂಸ್ಕೃತಿಯನ್ನು ಉತ್ತೇಜಿಸುವ ಬದಲು ಅವರು ಸ್ವಾಯತ್ತತೆ ಮತ್ತು ಸ್ವರಾಜ್ಯ ಸಂಸ್ಕೃತಿಯನ್ನು ಬೆಳೆಸಿದರು. ಇದರರ್ಥ ಸ್ವಯಂ ಆಡಳಿತದ ಮತ್ತು ಕಡಿಮೆ ಅವಲಂಬನೆಯ ಜ್ಞಾನವನ್ನು ಉತ್ತೇಜಿಸುವುದು. ಇದರರ್ಥ ಸಹಕಾರ ಮತ್ತು ಶಿಸ್ತನ್ನು

ಬೋಧಿಸುವುದು ಎಂದು. ಇದರರ್ಥ ಅನೈತಿಕ ಮತ್ತು ಶೋಷಣೆಯ ನಡವಳಿಕೆಯ ವಿರುದ್ಧ ನಿಲ್ಲುವ ಮೌಲ್ಯಗಳನ್ನು ಉತ್ತೇಜಿಸುವುದು ಎಂದೂ ಸಹ ಆಗಿದೆ.

ಸ್ವರಾಜ್ಯ ಹೋರಾಟದಲ್ಲಿ ಉದಾಹರಿಸಲಾದ ಮಾನವ ಬಂಡವಾಳದ ವಿಶಾಲ ದೃಷ್ಟಿಕೋನವೆಂದರೆ, ಮಾನವರ ಶಿಕ್ಷಣವು ಮಾನವ ಅಸ್ತಿತ್ವದ ಸತ್ಯಗಳನ್ನು ಬೆಳೆಸುವ ಗುರಿಯನ್ನು ಹೊಂದಿರಬೇಕು. ಬದಲಾಗಿ ಮನುಷ್ಯರನ್ನು ಇತರರನ್ನು ಶೋಷಣೆ ಮಾಡುವ, ತಿರುಚಿದ ಬುದ್ಧಿ ಉಳ್ಳ ಸಾಧನಗಳನ್ನಾಗಿ ಪರಿವರ್ತಿಸಬಾರದು. ಮಾರ್ಥಾ ನುಸ್ಬಾಮ್ (2011) ಮತ್ತು ಅಮರ್ತ್ಯ ಸೇನ್ (1999) ಅಭಿವೃದ್ಧಿಪಡಿಸಿದ 'ಸಾಮರ್ಥ್ಯ ಸಿದ್ಧಾಂತ'ದಲ್ಲಿ ಇದೊಂದು ವಿಶಾಲವಾದ ವಿಧಾನವಾಗಿದೆ. ಸಮಾಜಗಳು ಮತ್ತು ಅವುಗಳ ಆರ್ಥಿಕ ಅಂಗಗಳು ಮಾನವ ಸಾಮರ್ಥ್ಯಗಳ ಬೆಳವಣಿಗೆಗೆ ಪ್ರಾಮುಖ್ಯತೆಯನ್ನು ನೀಡಬೇಕು ಎಂದು ಅವರು ವಾದಿಸುತ್ತಾರೆ. ಸಾಮಾಜಿಕ ಅಸ್ತಿತ್ವದ ಉದ್ದೇಶವೇ ಮಾನವರ ಹಿತ ಕಾಯುವುದಾಗಿದೆ- ಯಾರೋ ಕೆಲವರ ಹಿತವಲ್ಲ, ಬದಲಿಗೆ ಎಲ್ಲಾ ಮಾನವರ ಹಿತ. ಇದಕ್ಕಾಗಿ ಕೆಲವು ವ್ಯಕ್ತಿಗಳು ತಮ್ಮ ಸ್ವಂತ ಗುರಿಗಳನ್ನು ತಲುಪಲು ಜನರನ್ನು ಸಾಧನವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ. ಮಾನವ ಬಂಡವಾಳವನ್ನು ಶ್ರೀಮಂತ ಮತ್ತು ಶಕ್ತಿಶಾಲಿಗಳಿಗೆ ಅಗತ್ಯವಿರುವ ಸಾಮರ್ಥ್ಯಗಳ ಬೆಳವಣಿಗೆಯಾಗಿ ನೋಡುವ ಬದಲು, ಅದನ್ನು ಸಾಮಾನ್ಯ ಮಾನವ ಸಾಮರ್ಥ್ಯಗಳ ಬೆಳವಣಿಗೆ ಎಂದು ನೋಡಬೇಕು. ಕೆಲಸಕ್ಕೆ ಸಂಬಂಧಿಸಿದ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳು ಕೇವಲ ಸಂಸ್ಥೆಯ ಮಾಲೀಕರನ್ನು ಮಾತ್ರ ಬೆಳೆಸದೆ ಎಲ್ಲರ ಏಳಿಗೆಗಾಗಿ ಇರಬೇಕು. ಕೆಲಸ ಮಾಡುವ ಮತ್ತು ಕೆಲಸ ಕಲಿಯುವ ಉದ್ದೇಶಗಳು ಒಬ್ಬರ ಕಲ್ಪನೆಯನ್ನು ಬೆಳೆಸುವುದರ ಜೊತೆಗೆ ಅವರ ಆಲೋಚನಾ ಸಾಮರ್ಥ್ಯವನ್ನು ವೃದ್ಧಿಸಬೇಕು. ಮಾನವ ಬೆಳವಣಿಗೆಯು ವಿಶಾಲತೆಯನ್ನು ಕಾಯ್ದುಕೊಂಡರೆ ಕಡಿಮೆ ಲಾಭದಾಯಕವಾಗಿರುತ್ತದೆ ಎಂಬ ಕಾರಣಕ್ಕೆ ಇದನ್ನು ಯಾಂತ್ರಿಕ ಕೌಶಲ್ಯಗಳಿಗೆ ಸೀಮಿತಗೊಳಿಸಲಾಗುವುದಿಲ್ಲ. ಕೆಲವರಿಗೆ ಮಾತ್ರ ಲಾಭದಾಯಕವಾಗಿಸುವುದಕ್ಕಿಂತ ಮಾನವನ ಹಿತವೇ ಮುಖ್ಯವಾಗಬೇಕು.

**ರಚನಾತ್ಮಕ ನಿರ್ಬಂಧಗಳು ಮತ್ತು ಮಾನವ ಬಂಡವಾಳ**

ನೈತಿಕ ಪರಿಗಣನೆಗಳನ್ನು ಆಧರಿಸಿರುವ ಮಾನವ ಬಂಡವಾಳದ ಮುನ್ನೋಟವು ಕೇವಲ ಅನಿಯಂತ್ರಿತ ಮಾರುಕಟ್ಟೆಯ ಪರಿಗಣನೆಗಳನ್ನು ಆಧರಿಸಿದ ಮುನ್ನೋಟಕ್ಕಿಂತ ಯೋಗ್ಯವಾಗಿದೆ ಎಂಬಂತೆ ಕಾಣುತ್ತದೆ. ಆದಾಗ್ಯೂ, ಅಂತಹ ಮುನ್ನೋಟವನ್ನು ಅನುಸರಿಸಲು ಬಯಸುವವರಿಗೆ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯು

ಪ್ರಮುಖ ಸವಾಲುಗಳನ್ನು ಒಡ್ಡುತ್ತದೆ. ಅಧಿಕಾರದ ಸಮತೋಲನವು ಹೆಚ್ಚು ಸಂಪತ್ತಿರುವ ಕಡೆಗೆ ಕೇಂದ್ರೀಕರಣಗೊಂಡು ಕೆಲವೇ ಕೆಲವು ಸಣ್ಣ ಪ್ರಮಾಣದ ಕೈಗಳ ಕಡೆಗೆ ವಾಲುತ್ತಿರುವುದನ್ನು ಕಾಣಬಹುದು. ಈ ದೇಶದಲ್ಲಿ ದೊಡ್ಡ ಉದ್ಯಮಗಳು ಕ್ರಮೇಣ ಬಲಗೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗೆಯೇ ಹಿಂದೆ, ರೈತರು, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಸರ್ಕಾರಿ ನೌಕರರು, ಸಂಘಟಿತ ಕಾರ್ಮಿಕರು ಮುಂತಾದ ಸಾರ್ವಜನಿಕ ವ್ಯವಹಾರಗಳಲ್ಲಿ ಹೆಚ್ಚಿನ ಧ್ವನಿಯನ್ನು ಹೊಂದಿದ್ದ ಸಾಮಾಜಿಕ ವರ್ಗಗಳು ತುಲನಾತ್ಮಕವಾಗಿ ದುರ್ಬಲಗೊಳ್ಳುತ್ತಿವೆ. ವರ್ಗಗಳಲ್ಲಿನ ಸಾಪೇಕ್ಷ ಅಧಿಕಾರಗಳ ಬದಲಾವಣೆಯು ಎಲ್ಲರ ಹಿತವನ್ನು ಕಾಯುವುದೇ ಆದರೆ ಅದು ಸಮಸ್ಯೆಯಾಗುವುದಿಲ್ಲ. ದೇಶದ ಒಟ್ಟು ಆರ್ಥಿಕ ಸಂಪತ್ತು ಗಣನೀಯವಾಗಿ ಹೆಚ್ಚಿದರೂ, ಎಲ್ಲಾ ವಿಭಾಗಗಳಲ್ಲಿಯೂ ಗಮನಾರ್ಹವಾಗಿ ಹಿತ ಉಂಟಾಗಿದೆ ಎಂಬುದಕ್ಕೆ ದೊರೆತಿರುವ ಪುರಾವೆಗಳು ಸಮಾಧಾನಕರವಾಗಿಲ್ಲ. ಉದಾಹರಣೆಗೆ, ಔಪಚಾರಿಕ ವಲಯದಲ್ಲಿ ಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಪಟ್ಟಂತೆ ನಾವು ಗಣನೀಯ ಬೆಳವಣಿಗೆಯನ್ನು ಹೊಂದಿರುವಂತೆ ತೋರುತ್ತಿಲ್ಲ. ಈ ಗುಂಪಿನ ಉದ್ಯೋಗಿ ಸಂಖ್ಯೆಗಳು ಹೆಚ್ಚು ಕಡಿಮೆ ನಿಶ್ಚಲವಾಗಿರುವಂತೆ ತೋರುತ್ತಿದೆ. ಏತನ್ಮಧ್ಯೆ, ದೇಶದ ಕನಿಷ್ಠ ಮುಕ್ಕಾಲು ಭಾಗದಷ್ಟು ಜನರು ಬಳಕೆಯಲ್ಲಿ ಮತ್ತು ಆದಾಯದಲ್ಲಿ ಅತ್ಯಂತ ಕಡಿಮೆ ಮಟ್ಟದಲ್ಲಿ ಉಳಿದಿದ್ದಾರೆ. 68ನೇ ಎನ್ ಎಸ್ ಎಸ್ ಆಧಾರದ ಮೇಲೆ 2011-12ರಲ್ಲಿ ದೇಶದ ಸುಮಾರು 75% ಜನರು ಪ್ರತಿ ವ್ಯಕ್ತಿಗೆ ದಿನಕ್ಕೆ 67 ರೂ. ಗಿಂತ ಕಡಿಮೆ ಖರ್ಚಿನ ಲೆಕ್ಕದಲ್ಲಿ ಜೀವನ ನಡೆಸುತ್ತಿದ್ದರು ಎಂದು ನನ್ನ ಸ್ವಂತ ಲೆಕ್ಕಾಚಾರಗಳು ತೋರಿಸುತ್ತವೆ. ಇಂದು ಅದು ಹೆಚ್ಚೆಂದರೆ ಒಬ್ಬ ವ್ಯಕ್ತಿಗೆ ದಿನಕ್ಕೆ ಸುಮಾರು 100-125 ರೂ. ಗೆ ಏರಿರಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ಮನೆಯಲ್ಲಿ ಐದು ಸದಸ್ಯರಿದ್ದರೆ, ಭಾರತದ ಸುಮಾರು 75% ಕುಟುಂಬಗಳು ತಿಂಗಳಿಗೆ 15,000 ದಿಂದ 20,000 ರೂಪಾಯಿಗಳಿಗಿಂತ ಕಡಿಮೆ ಹಣವನ್ನು ಬಳಕೆ ಮಾಡುತ್ತಿದ್ದಾರೆ. ಸುಮಾರು 33% ಕುಟುಂಬಗಳು ತಿಂಗಳಿಗೆ ರೂ 7500 ದಿಂದ 10000 ಕ್ಕಿಂತ ಕಡಿಮೆ ಬಳಕೆ ಮಾಡುತ್ತಿರಬಹುದು. ಇದು ಬ್ರಿಟಿಷ್ ವಸಾಹತುಶಾಹಿಯನ್ನು ಉರುಳಿಸಿದ ನಂತರ ಎಪ್ಪತ್ತು ವರ್ಷಗಳ ಅಂತ್ಯದ ಲೆಕ್ಕಾಚಾರ. ಮಧ್ಯಮ ವರ್ಗದ ಆದಾಯ ಮತ್ತು ಬಳಕೆಯ ಮಟ್ಟದಲ್ಲಿ ಈ ರೀತಿಯ ನಿಧಾನಗತಿಯ ಚಲನೆಯ ದರಗಳು ಕಳವಳಕಾರಿಯಾಗಿದೆ. ಅಲ್ಲೊಂದು ಇಲ್ಲೊಂದು ಭರವಸೆ ಹುಟ್ಟಿಸುವ ವಿಷಯಗಳು ಇದ್ದರೂ, ಒಟ್ಟಾರೆ ಚಿತ್ರಣವು ನಮ್ಮ ರಾಜಕೀಯ ಆರ್ಥಿಕತೆಯು ಇಲ್ಲಿಯವರೆಗೆ ಬಡವರ ತ್ವರಿತ ಸಬಲೀಕರಣದ ಮೇಲೆ ಕೇಂದ್ರೀಕರಿಸಲು ಸಾಧ್ಯವಾಗಿಲ್ಲ ಎಂದು ಸೂಚಿಸುತ್ತದೆ.

ವರ್ತಮಾನದ ಮಾರುಕಟ್ಟೆ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವುದನ್ನೇ ಗುರಿಯಾಗಿಸಿಕೊಳ್ಳುವ ಮಾನವ ಬಂಡವಾಳದ ಒಂದು ರೂಪವನ್ನು ಇಂದಿನ ಆರ್ಥಿಕ ಪರಿಸ್ಥಿತಿಗಳು ಸುಲಭವಾಗಿಸುತ್ತವೆ. ನಿಯಮಿತ ಮತ್ತು ಯೋಗ್ಯವಾದ ಸಂಬಳವನ್ನು ಪಡೆಯುವ ಸಣ್ಣ ಸಂಖ್ಯೆಯ ಜನರು ಉಳಿದವರ ಮೇಲೆ ಒತ್ತಡವನ್ನು ಹೇರುತ್ತಾರೆ. ಅವರನ್ನು ಸುರಕ್ಷಿತ ಮತ್ತು ಉತ್ತಮ ಉದ್ಯೋಗಿಗಳ ಶ್ರೇಣಿಗೆ ಸೇರಲು ಸಾಧ್ಯವಾಗಿಸುವ ಜ್ಞಾನ ಮತ್ತು ಸಂಸ್ಕೃತಿ ಇದೆ. ಅದನ್ನು ಒಪ್ಪಿಕೊಂಡರೆ ಖಂಡಿತವಾಗಿಯೂ ಉತ್ತಮ ಉದ್ಯೋಗ ಮತ್ತು ಶ್ರೇಣಿ ದೊರೆಯುತ್ತದೆ ಎಂಬುದು ಅವರ ಅತಿಯಾದ ನಂಬಿಕೆ. ಆದರೆ ಮಾನವ ಬಂಡವಾಳದ ನೈತಿಕ ದೃಷ್ಟಿಕೋನವು ನಮ್ಮನ್ನು ಈ ನಂಬಿಕೆಯ ವಿರುದ್ಧ ಎಚ್ಚರಿಸುತ್ತದೆ. ಇಂದಿನ ಮಾರುಕಟ್ಟೆಯ ಪರಿಸ್ಥಿತಿಗಳು ಉತ್ತಮ ವೇತನ ಮತ್ತು ಹೆಚ್ಚು ಗೌರವಾನ್ವಿತ ಕೆಲಸದ ತ್ವರಿತ ವಿಸ್ತರಣೆಗೆ ವಿರುದ್ಧಾಗಿದೆ ಎಂದು ತೋರುತ್ತದೆ. ಒಳ್ಳೆಯ ಕೆಲಸ ಯಾವುದು ಮತ್ತು ಒಳ್ಳೆಯ ದುಡಿಮೆ ಯಾವುದು ಎಂದು ಸ್ವತಂತ್ರವಾಗಿ ಕೇಳುವುದು ಮುಖ್ಯ. ಅದು ನಂತರ ಉತ್ಪಾದಕ ಕೆಲಸಕ್ಕೆ ಕಾರಣವಾಗುವ ಜ್ಞಾನ ಮತ್ತು ಸಂಸ್ಕೃತಿಯ ಕಲ್ಪನೆಗಳನ್ನು ರೂಪಿಸುವ ಉತ್ತಮ ಮಾರ್ಗದತ್ತ ಮಾರ್ಗದರ್ಶನ ಮಾಡುತ್ತದೆ.

ಮಾನವ ಬಂಡವಾಳದ ನೈತಿಕ ದೃಷ್ಟಿಕೋನವು ಎದುರಿಸುತ್ತಿರುವ ಸವಾಲುಗಳನ್ನು ನೋಡುವ ಇನ್ನೊಂದು ವಿಧಾನವೆಂದರೆ ನಮ್ಮ ಸುತ್ತಲೂ ಕೊನೆಯೇ ಇಲ್ಲದ ರೋಮಾಂಚಕಾರಿ ಸಾಧ್ಯತೆಗಳಿವೆ ಎಂದು ಹೇಳುವುದು. ಕೆಲವು ಉದಾಹರಣೆಗಳು ಹೀಗಿವೆ: ತಾಂತ್ರಿಕ ಶಿಕ್ಷಣವನ್ನು ಕುರಿತಂತೆ ಇಂದು ದೊಡ್ಡ ಉದ್ಯಮಗಳು ಬೆನ್ನತ್ತುತ್ತಿರುವ ವಿಷಯಗಳನ್ನಷ್ಟೇ ಅಲ್ಲದೇ ಸುಸ್ಥಿರವಾದ, ಮತ್ತು ಪರಿಸರದ ದೃಷ್ಟಿಯಿಂದ ಆರೋಗ್ಯಕರವಾದ ತಂತ್ರಜ್ಞಾನಗಳ ಬಗ್ಗೆ ತಿಳಿದುಕೊಳ್ಳುವುದನ್ನೂ ಒಳಗೊಂಡಿರುವ ಒಂದು ಸೃಜನಾತ್ಮಕ ಆಲೋಚನೆಯನ್ನು ಬೆಳೆಸುವುದು. ಮತ್ತೊಂದು ಉದಾಹರಣೆಯೆಂದರೆ, ಸಂಘಟನಾತ್ಮಕ ಜ್ಞಾನ ಮತ್ತು ಕೌಶಲ್ಯಗಳನ್ನು ಕಲಿಸುವುದು. ಇದರಿಂದಾಗಿ ಇಂದು ಕೇವಲ ಸಂಸ್ಥೆಗೆ ಅಗತ್ಯವಿರುವುದನ್ನು ಮಾತ್ರ ಉದ್ಯೋಗಿಗಳು ಮಾಡುವಂತಾಗದೇ ವಿಶಾಲ ವ್ಯಾಪ್ತಿಯ ತಿಳುವಳಿಕೆಯನ್ನು ಅವರು ಹೊಂದಲು ಸಹಕಾರಿಯಾಗುತ್ತದೆ ಮತ್ತು ಅವರ ಬೆಳವಣಿಗೆಗೆ ಕೂಡಾ ಸಹಾಯ ಮಾಡುತ್ತದೆ. ಕೇವಲ ಶ್ರೇಣೀಕರಣ, ನಿಯಂತ್ರಣ ಮತ್ತು ಸ್ಪರ್ಧೆಯ ಸಂಸ್ಕೃತಿಯ ಬದಲಿಗೆ ಸಮಾನತೆ. ಘನತೆ ಮತ್ತು ಸಹಾನುಭೂತಿಯ ಸಂಸ್ಕೃತಿಗಳನ್ನು ಉತ್ತೇಜಿಸುವುದು ಮತ್ತು ಮೌಲ್ಯೀಕರಿಸುವುದನ್ನು ಒಳಗೊಂಡಿರಬಹುದು. ಕೊನೆಯ ಉದಾಹರಣೆಯೆಂದರೆ ಉದ್ಯಮಶೀಲತೆಯ ಜ್ಞಾನವನ್ನು ಉತ್ತೇಜಿಸುವುದು. ಇದು ಕೇವಲ ಆರ್ಥಿಕ ಸಂಗ್ರಹಣೆ ಮತ್ತು

ಲಾಭದಾಯಕತೆಗೆ ಒತ್ತು ನೀಡುವ ಬದಲಾಗಿ ಪೋಷಿಸುವ ಸಂಸ್ಥೆಗಳನ್ನು ನಿರ್ಮಿಸುತ್ತದೆ, ಉತ್ಪಾದನೆ ಮತ್ತು ಸೇವೆಗೆ ಒತ್ತು ನೀಡುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಮಾನವ ಬಂಡವಾಳದ ಸರಳ ನೋಟವು ಕೆಲಸ ಮತ್ತು ಕೆಲಸಕ್ಕೆ ಸಂಬಂಧಿಸಿದ ಜ್ಞಾನಗಳು ಸಾಂಸ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸರದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾಗಬಹುದು. ಆ ಪರಿಸರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದರಿಂದ ಮಾನವ ಬಂಡವಾಳವನ್ನು ಹೇಗೆ ವಿನ್ಯಾಸಗೊಳಿಸಬಹುದು ಮತ್ತು ವರ್ಧಿಸಬಹುದು ಎಂಬುದನ್ನು ಉತ್ತಮವಾಗಿ ಸೂತ್ರೀಕರಿಸಲು ಸಾಧ್ಯವಾಗುತ್ತದೆ. ಆದಾಗ್ಯೂ, ಪರಿಸರವನ್ನು ವಿಮರ್ಶಾತ್ಮಕವಾಗಿ ನೋಡದೇ, ಯಥಾಸ್ಥಿತಿಯ ರೀತಿಯಲ್ಲಿ ನೋಡಲಾಗುವುದಿಲ್ಲ. ನಾವು ಕೆಲಸದ ಉದ್ದೇಶ ಮತ್ತು ಮಾನವ ಬಂಡವಾಳದ ಉದ್ದೇಶಗಳನ್ನು ಕುರಿತು ನೈತಿಕ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದಾಗ ಮಾತ್ರ ಹೆಚ್ಚು ಅರ್ಥಗರ್ಭಿತ ರೀತಿಯಲ್ಲಿ ಮಾನವ ಹಿತದ ಕಡೆಗೆ ನಡೆಯಲು ಪ್ರಾರಂಭಿಸುತ್ತೇವೆ.

**ಉಲ್ಲೇಖಗಳು**

ಆರೋ, ಕೆ. (1973). ಹೈಯರ್ ಎಜುಕೇಶನ್ ಆಸ್ ಎ ಫಿಲ್ಟರ್. *ಜರ್ನಲ್ ಆಫ್ ಪಬ್ಲಿಕ್ ಎಕನಾಮಿಕ್ಸ್,* 2(3), 193-216.

ಬೆಕರ್, ಜಿ.ಎಸ್. (1975). *ಯೂಮನ್ ಕ್ಯಾಪಿಟಲ್: ಎ ಥಿಯರಿಟಿಕಲ್ ಅಂಡ್ ಎಂಪಿರಿಕಲ್ ಅನಾಲಿಸಿಸ್, ವಿತ್ ಸ್ಪೆಷಲ್ ರೆಫೆರೆನ್ಸ್ ಟು ಎಜುಕೇಶನ್* (ಎರಡನೇ ಸಂ.) ಪ್ರಿನ್ಸ್ ಟನ್: ಪ್ರಿನ್ಸ್ ಟನ್ ವಿಶ್ವವಿದ್ಯಾಲಯ ಮುದ್ರಣ. (ಮೂಲ ಕೃತಿ ಮುದ್ರಣ: 1964)

ಬರ್ಗ್, ಐ. (2003). *ಎಜುಕೇಶನ್ ಅಂಡ್ ಜಾಬ್ಸ್: ದಿ ಗ್ರೇಟ್ ಟ್ರೇನಿಂಗ್ ರಾಬರಿ.* ನ್ಯೂಯಾರ್ಕ್: ಪರ್ಚೆರಾನ್ ಪ್ರೆಸ್. (ಮೂಲ ಕೃತಿ ಮುದ್ರಣ: 1970)

ಬೌರ್ದಿಯು, ಪಿ. ಅಂಡ್ ಪ್ಯಾಸರ್ಸನ್, ಜೆ-ಸಿ. (1990). *ರಿಪ್ರೊಡಕ್ಷನ್ ಇನ್ ಎಜುಕೇಶನ್, ಸೊಸೈಟಿ ಅಂಡ್ ಕಲ್ಚರ್* (ಎರಡನೇ ಸಂ.) ಲಂಡನ್: ಸೇಜ್.

ಕೋಲಿನ್ಸ್, ಆರ್. (1971). ಫಂಕ್ಶನಲ್ ಅಂಡ್ ಕಾನ್ಫ್ಲಿಕ್ಟ್ ಥಿಯರೀಸ್ ಆಫ್ ಎಜುಕೇಶನಲ್ ಸ್ಟ್ರಾಟಿಫಿಕೇಶನ್. *ಅಮೇರಿಕನ್ ಸೋಶಿಯಾಲಜಿಕಲ್ ರಿವ್ಯೂ*, 36(6), 1002-1019.

ಕೋಲಿನ್ಸ್, ಆರ್. (1979). *ದಿ ಕ್ರೆಡೆನ್ಶಿಯಲ್ ಸೊಸೈಟಿ: ಆನ್ ಹಿಸ್ಟರಾಜಿಕಲ್ ಸೋಶಿಯಾಲಜಿ ಆಫ್ ಎಜುಕೇಶನ್ ಅಂಡ್ ಸ್ಟ್ರಾಟಿಫಿಕೇಶನ್*. ನ್ಯೂಯಾರ್ಕ್: ಅಕೆಡೆಮಿಕ್ ಪ್ರೆಸ್.

ಮರ್ಫಿ, ಆರ್. (2001). *ಸೋಶಿಯಲ್ ಕ್ಲೋಶರ್: ದಿ ಥಿಯರಿ ಆಫ್ ಮೊನೊಪೊಲೈಸೇಶನ್ ಅಂಡ್ ಎಕ್ಸಕ್ಲೂಶನ್*. ಆಕ್ಸಫರ್ಡ್: ಕ್ಲಾರೆಂಡಾನ್ ಪ್ರೆಸ್.

ನುಸ್ಬಾಮ್, ಎಂ.ಸಿ. (2011). *ಕ್ರಿಯೇಟಿಂಗ್ ಕೆಪಬಲಿಟೀಸ್ ದಿ ಯೂಮನ್ ಡೆವಲಪ್ಮೆಂಟ್ ಅಪ್ರೋಚ್*. ಕೇಂಬ್ರಿಜ್, ಮಾಸ್: ಬೆಲ್ಕ್ಯಾಪ್ ಪ್ರೆಸ್ ಆಫ್ ಹಾರ್ವರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ.

ಸೆನ್, ಎ. (1999). *ಡೆವಲಪ್ಮೆಂಟ್ ಆಸ್ ಫ್ರೀಡಮ್*. ಆಲ್ಫ್ರೆಡ್ ಎ ನಾಫ್.

ಷುಲ್ಟ್ಜ್, ಟಿ.ಡಬ್ಲೂ. (1977). ಇನ್ವೆಸ್ಮೆಂಟ್ ಇನ್ ಯೂಮನ್ ಕ್ಯಾಪಿಟಲ್. ಇನ್ ಜೆ. ಕ್ಯಾರಬೆಲ್ ಅಂಡ್ ಎ.ಹೆಚ್.ಹಾಲ್ಸಿ (ಎಡ್ಸ್.), ಪವರ್ ಅಂಡ್ ಐಡಿಯಾಲಜಿ ಇನ್ ಎಜುಕೇಶನ್ (ಪು. 313-324). ನ್ಯೂಯಾರ್ಕ್: ಆಕ್ಸ್ ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ.

ಸ್ಪೆನ್ಸ್, ಎಂ. (1973). ಜಾಬ್ ಮಾರ್ಕೆಟ್ ಸಿಗ್ನಲಿಂಗ್. ಕ್ವಾರ್ಟರ್ಲಿ ಜರ್ನಲ್ ಆಫ್ ಎಕನಾಮಿಕ್ಸ್, 87(3), 355-374.

ಸ್ಟಿಗ್ಲಿಟ್ಸ್, ಜೆ.ಈ. (1975). ದಿ ಥಿಯರಿ ಆಫ್ "ಸ್ಕ್ರೀನಿಂಗ್", ಎಜುಕೇಶನ್, ಅಂಡ್ ದಿ ಡಿಸ್ಟ್ರಿಬ್ಯೂಶನ್ ಆಫ್ ಇನ್ ಕಮ್. ಅಮೇರಿಕನ್ ಎಕನಾಮಿಕ್ ರಿವ್ಯೂ, 65(3), 283-300.